ಎಸ್ ಪಿ ವಿ ಜಿ ಎಂ ಸಿ ಟ್ರಸ್ಟ್ (ರಿ)

# 57ನೇ ಪಾರಂಪರಿಕ ಸಂಗೀತೋತ್ಸವ

# Heritage Music Festival '18

ಸೆಪ್ಟೆಂಬರ್
13 ರಿಂದ 24
2018




# 2916, 5th Main, 8th Cross
V V Mohalla, Mysore - 570 002
Tel : 9845501178
E-mail : spvgmctrust@gmail.com
Web : www.8thcrossganesha.org

# ನೂರರ ನೆನಪಿನಲ್ಲಿ



ಡಿ ಕೆ ಪಟ್ಟಮ್ಮಾಳ್



ಬಾಲಸರಸ್ವತಿ



ರಾಮನಾಡ್ ಕೃಷ್ಣನ್

ಸೆಪ್ಟೆಂಬರ್
September
13
ಗುರುವಾರ
Thursday

ಎಸ್ ಪಿ ವಿ ಜಿ ಎಂ ಸಿ ಟ್ರಸ್ಟ್
57ನೇ ಪಾರಂಪರಿಕ ಸಂಗೀತೋತ್ಸವ
ಹನ್ನೆರಡು ದಿನಗಳ ಸಂಗೀತ ಕಾರ್ಯಕ್ರಮಗಳ
ಉದ್ಘಾಟನೆ

ಸಂಜೆ 6.45ಕ್ಕೆ
**ವಿದ್ವಾನ್ ಮೇಲುಕೋಟೆ ಎಂ.ಜಿ. ಶ್ರೀಧರ್ & ಪಾರ್ಟಿ** – ನಾದಸ್ವರ
6.45 pm
**Vidwan Melukote M.G.Sridhar & Party** - Nadaswara



**ವಿದ್ವಾನ್ ಮೇಲುಕೋಟೆ ಎಂ ಜಿ ಶ್ರೀಧರ್**

ವಿದ್ವಾನ್ ಎಂ ಜಿ ಶ್ರೀಧರ್ ಅವರು ತಾತ ದಿವಂಗತ ವಿದ್ವಾನ್ ಎಸ್ ನಾಗರಾಜು ಮತ್ತು ತಂದೆ ಎಂ ಎನ್ ಗಣೇಶ್ ಅವರಲ್ಲಿ ಸಂಗೀತಾಭ್ಯಾಸ ಮಾಡಿರುತ್ತಾರೆ. ಆಕಾಶವಾಣಿ ಹಾಗೂ ದೂರದರ್ಶನದ ಕಲಾವಿದರಾಗಿರುವ ಇವರ ಕಾರ್ಯಕ್ರಮಗಳು ಎರಡೂ ಕಡೆಗಳಲ್ಲಿ ಪ್ರಸಾರವಾಗುತ್ತಿರುತ್ತವೆ. ಚೆನ್ನೈ, ಕೊಯಮತ್ತೂರು, ಸೇಲಂ, ನವದೆಹಲಿ ಹೀಗೆ ಭಾರತಾದ್ಯಂತ ಹಲವಾರು ಪ್ರಮುಖ ಸಭೆಗಳಲ್ಲಿ ಇವರು ಕಾರ್ಯಕ್ರಮ ನೀಡಿದ್ದಾರೆ. ಬೆಂಗಳೂರಿನ ಸಾಮಗಾನ ಸಂಗೀತ ಸಭಾ, ಮೈಸೂರಿನ ಗಾನಭಾರತೀ, ನಾದರಂಜನಿ ಸಂಗೀತ ಸಭಾ, ಶೃಂಗೇರಿ ಶಾರದಾ ಪೀಠ ಇತ್ಯಾದಿ ಹಲವು ಸಭೆಗಳಲ್ಲಿ ಇವರ ಕಾರ್ಯಕ್ರಮಗಳು ನಡೆದಿವೆ.

ಇವರ ಪ್ರತಿಭೆಗೆ ತಕ್ಕಂತೆ ಕನ್ನಡ ಅಭಿವೃದ್ಧಿ ಸಮಿತಿಯಿಂದ 'ಕರ್ನಾಟಕ ವಿಭೂಷಣ'ವೂ ಸೇರಿದಂತೆ ಹಲವು ಪ್ರಶಸ್ತಿಗಳು, ಸನ್ಮಾನಗಳು ಇವರಿಗೆ ಸಂದಿವೆ. 'ನಾದ ಸಂಭ್ರಮ' ಎಂಬ ಸಿಡಿಯನ್ನು ಕೂಡ ಇವರು ಹೊರತಂದಿದ್ದಾರೆ.


ಸೆಪ್ಟೆಂಬರ್
September

14

ಶುಕ್ರವಾರ
Friday

ಸಂಜೆ 6.45ಕ್ಕೆ
**ವಿದ್ವಾನ್ ಅಭಿಷೇಕ್ ರಘುರಾಮ್** – ಗಾಯನ
ವಿದುಷಿ ಅಕ್ಕರೈ ಸುಬ್ಬುಲಕ್ಷ್ಮಿ – ವಯೋಲಿನ್
ವಿದ್ವಾನ್ ಎನ್.ಸಿ. ಭಾರದ್ವಾಜ್ – ಮೃದಂಗ
ವಿದ್ವಾನ್ ವಜ್ಹಪಲ್ಲಿ ಆರ್ ಕೃಷ್ಣಕುಮಾರ್ – ಘಟಂ

6.45 pm
**Vidwan Abhishek Raghuram** - Vocal
Vidhushi Akkarai shubhalakshmi - Violin
Vidwan N.C.Bharadhwaj - Mridangam
Vidwan Vazhapalli R Krishnakumar - Ghatam



**ವಿದ್ವಾನ್ ಅಭಿಷೇಕ್ ರಘುರಾಂ**

ಯುವ ಕಲಾವಿದರಲ್ಲಿ ಅತ್ಯಂತ ಮುಂಚೂಣಿಯಲ್ಲಿರುವ ಅಭಿಷೇಕ್ ರಘುರಾಂ ಬೆಳೆದದ್ದೇ ಸಂಗೀತದ ನಡುವೆ. ಅವರ ತಂದೆಯ ತಂದೆ ಖ್ಯಾತ ಮೃದಂಗವಾದಕ ಪಾಲ್ಘಾಟ್ ರಘು ಹಾಗೂ ಅವರ ತಾಯಿಯ ತಂದೆ ಲಾಲ್‌ಗುಡಿ ಜಯರಾಮನ್. ವಿದ್ವಾನ್ ಪಿ ಎಸ್ ನಾರಾಯಣಸ್ವಾಮಿ ಅವರಲ್ಲಿ ಉನ್ನತ ಶಿಕ್ಷಣವನ್ನು ಅಭಿಶೇಕ್ ಪಡೆದಿದ್ದಾರೆ. ಆರನೇ ವಯಸ್ಸಿಗೇ ಕಾರ್ಯಕ್ರಮ ನೀಡಲು ಪ್ರಾರಂಭಿಸಿದ ಅಭಿಷೇಕ್ ಈಗಾಗಲೇ 20 ವರುಷಗಳ ಕಛೇರಿ ಅನುಭವ ಪಡೆದಿದ್ದಾರೆ. ಇವರಿಗೆ ಮೃದಂಗವಾದನದಲ್ಲೂ ಪರಿಣತಿ ಇದೆ. ಕರ್ನಾಟಕ ಸಂಗೀತದ ಎಲ್ಲಾ ಹಿರಿಯ ಪಕ್ಕವಾದ್ಯಗಾರರೊಡನೆ ಹಾಡಿರುವ ಹೆಗ್ಗಳಿಕೆ ಇವರದು. ಹಲವು ಹಿಂದುಸ್ತಾನಿ ಖ್ಯಾತನಾಮರೊಂದಿಗೆ ಜುಗಲ್‌ಬಂದಿ ಪ್ರಸ್ತುತಪಡಿಸಿದ್ದಾರೆ. ದೇಶವಿದೇಶಗಳ ಎಲ್ಲಾ ಪ್ರಖ್ಯಾತ ವೇದಿಕೆಗಳಲ್ಲಿ ಹಾಡಿದ್ದಾರೆ. ಗಾಯನ ಹಾಗೂ ವಾದನಗಳಿಗೆ ಹಲವು ತಿಲ್ಲಾನಗಳನ್ನು ರಚಿಸಿದ್ದಾರೆ. ಅಧ್ಯಾಪನವೂ ಅವರ ಆಸಕ್ತಿಯ ಕ್ಷೇತ್ರ. ಹಲವಾರು ಸೋದಾಹರಣ ಪ್ರಾತ್ಯಕ್ಷಿಕೆಗಳನ್ನೂ ನೀಡಿದ್ದಾರೆ. ಶ್ರೀಯುತರು ಸಂಗೀತ ನಾಟಕ ಅಕಾಡೆಮಿಯ ಉಸ್ತಾದ್ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರಕ್ಕೆ, ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಬೆಸ್ಟ್ ಸೀನಿಯರ್ ವೋಕಲಿಸ್ಟ್, ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರು.

ಸೆಪ್ಟೆಂಬರ್
September
15
ಶನಿವಾರ
Saturday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ವಿರಾಟನಗರ ಪ್ರವೇಶ
ವಾಚನಕಾರರು: ಶ್ರೀಮತಿ ಲಲಿತಾ ಎಸ್ ಶೇಖರ್
ವ್ಯಾಖ್ಯಾನಕಾರರು: ಶ್ರೀಮತಿ ಸುಮಾ ಕಿರಣ್

ಸಂಜೆ 6.45ಕ್ಕೆ
**ವಿದುಷಿ ಅಕ್ಕರೈ ಶುಭಲಕ್ಷ್ಮಿ, ವಿದುಷಿ ಅಕ್ಕರೈ ಸ್ವರ್ಣಲತಾ** – ದ್ವಂದ್ವ ವಯೋಲಿನ್
ವಿದ್ವಾನ್ ಕೆ.ಯು.ಜಯಚಂದ್ರ ರಾವ್ – ಮೃದಂಗ
ವಿದ್ವಾನ್ ವಜ್ಹಪಲ್ಲಿ ಆರ್ ಕೃಷ್ಣಕುಮಾರ್ – ಘಟಂ

6.45 pm
**Vidhushi Akkarai Shubhalakshmi, Akkarai Swarnalatha** - Violin Duet
Vidwan K.U. Jayachandra Rao - Mridangam
Vidwan Vazhapalli R Krishnakumar - Ghatam



**ವಿದುಷಿ ಅಕ್ಕರೈ ಶುಭಲಕ್ಷ್ಮಿ ಮತ್ತು ಅಕ್ಕರೈ ಸ್ವರ್ಣಲತಾ**

ಅಕ್ಕರೈ ಸಹೋದರಿಯರು ಸಂಗೀತ ಕುಟುಂಬಕ್ಕೆ ಸೇರಿದವರು. ತಾತ ಸುಚೀಂದ್ರಂ ಶಿವಸುಬ್ರಮಣಿಯನ್ ಬಹುಮುಖ ಪ್ರತಿಭೆಯ ಕಲಾವಿದರು. ಅಜ್ಜಿ ಆರ್ ಸ್ವರ್ಣಾಂಬಾಳ್ ಹರಿಕಥಾ ಕಲಾವಿದೆ. ತಂದೆ ಸ್ವಾಮಿನಾಥನ್ ಕೂಡ ನುರಿತ ವಯೋಲಿನ್‌ವಾದಕರು. ಹಾಗಾಗಿಯೇ ಸಹೋದರಿಯರಿಬ್ಬರೂ ವಯೋಲಿನ್‌ವಾದನ ಮತ್ತು ಹಾಡುಗಾರಿಕೆ ಎರಡರಲ್ಲೂ ಪರಿಣತರು. ತಂದೆಯವರಿಂದ ಕಲಿತ ನಂತರ ಶ್ರಿಯುತರಾದ ವಿ ಜಾನಕೀರಾಮನ್, ಓ ವಿ ಸುಬ್ರಮಣಿಯನ್, ಪಿ ಎಸ್ ನಾರಾಯಣಸ್ವಾಮಿ ಹಾಗೂ ಚಿತ್ರವೀಣಾ ರವಿಕಿರಣ್ ಅವರಲ್ಲಿ ಶುಭಲಕ್ಷ್ಮಿ ಕಲಿಕೆ ಮುಂದುವರೆಸಿದರು. ಇಂದಿನ ವಯೋಲಿನ್‌ವಾದಕರಲ್ಲೆಲ್ಲಾ ಶುಭಲಕ್ಷ್ಮಿ ತಮ್ಮ ವಿಶಿಷ್ಟ ನಾದಗುಣದಿಂದಾಗಿ ಮತ್ತು ಪರಿಪೂರ್ಣ ಗಾಯಕಿ ಶೈಲಿಯಿಂದಾಗಿ ತೀರಾ ಭಿನ್ನವಾಗಿ ಮತ್ತು ವಿಶೇಷವಾಗಿ ಎದ್ದು ಕಾಣುತ್ತಾರೆ. ಕರ್ನಾಟಕ ಸಂಗೀತದ ಹಿರಿಯ, ಶ್ರೇಷ್ಠ ಕಲಾವಿದರಿಗೆಲ್ಲಾ ಪಕ್ಕವಾದ್ಯ ನುಡಿಸಿ ಮೆಚ್ಚುಗೆ ಪಡೆದಿದ್ದಾರೆ. ದೇಶವಿದೇಶಗಳಲ್ಲಿ ನುಡಿಸಿರುವುದೇ ಅಲ್ಲದೇ ಹಲವಾರು ಪ್ರಾತ್ಯಕ್ಷಿಕೆಗಳನ್ನು ಪ್ರಸ್ತುತಪಡಿಸಿದ್ದಾರೆ. ರಾಜೀವ್ ಗಾಂಧಿ ಯುವಪುರಸ್ಕಾರ, ಬಿಸ್ಮಿಲ್ಲಾಖಾನ್ ಯುವಪುರಸ್ಕಾರ, ಷಣ್ಮುಖ ಸಂಗೀತ ಶಿರೋಮಣಿ ಹೀಗೆ ಹಲವು ಪ್ರಶಸ್ತಿಗಳಿಗೆ ಭಾಜನರು.

ಸೆಪ್ಟೆಂಬರ್
September
16
ಭಾನುವಾರ
Sunday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಕೀಚಕ ಸೈರಂಧ್ರಿ
ವಾಚನಕಾರರು: ಶ್ರೀಮತಿ ವಸಂತ ಲಕ್ಷ್ಮೀ ವೆಂಕಟಸುಬ್ಬಯ್ಯ, ಹಾಸನ
ವ್ಯಾಖ್ಯಾನಕಾರರು: ಶ್ರೀಮತಿ ಟಿ.ವಿ. ಮೀರಾ, ಕೆಂಗೇರಿ

ಸಂಜೆ 6.45ಕ್ಕೆ
**ವಿದ್ವಾನ್ ಆದಿತ್ಯ ಪ್ರಕಾಶ್** – ಗಾಯನ
ವಿದ್ವಾನ್ ನಿಶಾಂತ್ ಚಂದರ್ – ವಯೋಲಿನ್
ವಿದ್ವಾನ್ ಅಂಬೂರ್ ಪದ್ಮನಾಭನ್ – ಮೃದಂಗ
ವಿದ್ವಾನ್ ಬಿ. ರಾಜಶೇಖರ್ – ಮೊರ್ಸಿಂಗ್

6.45 pm
**Vidwan Aditya Prakash** - Vocal
Vidwan Nishant Chandar - Violin
Vidwan Ambur Padmanabhan - Mridangam
Vidwan B. Rajashekar - Morsing



**ವಿದ್ವಾನ್ ಆದಿತ್ಯ ಪ್ರಕಾಶ್**
ತಮ್ಮ ಕಸುವುಳ್ಳ ಭಾವುಕ ಕಂಠಕ್ಕೆ ಹೆಸರುವಾಸಿಯಾಗಿರುವ ವಿದ್ವಾನ್ ಆದಿತ್ಯ ಪ್ರಕಾಶ್ ಯುವಪೀಳಿಗೆಯ ಹೆಸರಾಂತ ಗಾಯಕ. ಪಿ ಎಸ್ ನಾರಾಯಣಸ್ವಾಮಿ ಮತ್ತು ಪಾಲ್ಘೈ ಸಿ. ಕೆ ರಾಮಚಂದ್ರ ಅವರಲ್ಲಿ ಕಲಿತು ತಮ್ಮ ಹದಿನಾಲ್ಕರ ಹರೆಯದಲ್ಲೇ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರ ಮುಂದೆ ಹಾಡಿ ಸೈ ಎನಿಸಿಕೊಂಡವರು. ಇಂದು ಸೆಮ್ಮಂಗುಡಿ ಬಾನಿಯ ನಿಷ್ಠಾವಂತ ಪ್ರತಿಪಾದಕರು. ಈಗ ವಿದ್ವಾನ್ ಆರ್ ಕೆ ಶ್ರೀರಾಂಕುಮಾರ್ ಮತ್ತು ಟಿ ಎಂ ಕೃಷ್ಣ ಅವರಲ್ಲಿ ತಮ್ಮ ಕಲಿಕೆಯನ್ನು ಮುಂದುವರೆಸಿದ್ದಾರೆ. ಪಂಡಿತ್ ರವಿಶಂಕರ್ ಅವರೊಂದಿಗೆ "ಲೀಡ್ ವೋಕಲಿಸ್ಟ್" ಆಗಿ ಫೆಸ್ಟಿವಲ್ ಆಫ್ ಇಂಡಿಯಾ ಥ್ರೀ ವೃಂದದಲ್ಲಿ ವಿಶ್ವವಿಡೀ ಸುತ್ತಿರುವ ಹೆಚ್ಚುಗಾರಿಕೆಯೂ ಆದಿತ್ಯ ಅವರದು. ದೇಶ ವಿದೇಶಗಳ ಎಲ್ಲಾ ಖ್ಯಾತ ವೇದಿಕೆಗಳಲ್ಲಿಯೂ ಇವರು ಹಾಡಿದ್ದಾರೆ. ಬಹುಮುಖ ಪ್ರತಿಭೆಯ ಆದಿತ್ಯ ನೈವೇಲಿ ನಾರಾಯಣ್ ಅವರಿಂದ ಮೃದಂಗವನ್ನೂ ಕಲಿತಿದ್ದಾರೆ. ಭರತನಾಟ್ಯಕ್ಕೆ ರಚನೆಗಳನ್ನು ಮಾಡಿ, ಹಲವು ನೃತ್ಯ ಕಾರ್ಯಕ್ರಮಗಳನ್ನು ನಿರ್ಮಿಸಿದ್ದಾರೆ. ಎಂ ಡಿ ರಾಮನಾಥನ್ ಪ್ರಶಸ್ತಿ, ಯುವ ಕಲಾಭಾರತಿ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳು ಇವರಿಗೆ ಸಂದಿದೆ.

ಸೆಪ್ಟೆಂಬರ್
September
**17**
ಸೋಮವಾರ
Monday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಕೀಚಕ ಪ್ರಸಂಗ ಭಾಗ–1
ವಾಚನಕಾರರು: ಶ್ರೀಮತಿ ಪದ್ಮಾವತಿ ನರಸಿಂಹನ್
ವ್ಯಾಖ್ಯಾನಕಾರರು: ಶ್ರೀ ಸುದರ್ಶನ್ ಸಿ ಎಸ್

ಸಂಜೆ 6.45ಕ್ಕೆ
**ವಿದ್ವಾನ್ ಜೆ ಬಿ ಶ್ರುತಿಸಾಗರ್** – ವೇಣುವಾದನ
ವಿದ್ವಾನ್ ಮತ್ತೂರ್ ಶ್ರೀನಿಧಿ – ವಯೋಲಿನ್
ವಿದ್ವಾನ್ ಬಿ.ಸಿ.ಮಂಜುನಾಥ್ – ಮೃದಂಗ
ವಿದ್ವಾನ್ ಎಸ್. ಮಂಜುನಾಥ್ – ಘಟಂ

6.45 pm
**Vidwan J B Shruti Sagar** - Flute,
Vidwan Mattur Srinidhi - Violin
Vidwan B.C.Manjunath - Mridangam
Vidwan S. Manjunath - Ghatam



**ವಿದ್ವಾನ್ ಜೆ ಬಿ ಶ್ರುತಿಸಾಗರ್**

ಯುವಪೀಳಿಗೆಯ ಕೊಳಲುವಾದರಲ್ಲಿ ತುಂಬಾ ಮೆಚ್ಚುಗೆ ಪಡೆದಿರುವ ವಿದ್ವಾನ್ ಜೆ ಬಿ ಶ್ರುತಿಸಾಗರ್ ಸಂಗೀತದಲ್ಲಿ ಸ್ನಾತಕೋತ್ತರ ಪದವೀಧರರು ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರರು. ತಮ್ಮ ಆರಂಭದ ಶಿಕ್ಷಣವನ್ನು ಶ್ರೀ ಬಾಲಸಾಯಿ ಅವರಲ್ಲಿ ಪಡೆದು, ಈಗ ಕಲೈಮಾಮಣಿ ಡಾ ಎಸ್ ಸುಂದರ್ ಅವರಲ್ಲಿ ಕಲಿಕೆಯನ್ನು ಮುಂದುವರೆಸುತ್ತಿದ್ದಾರೆ. ಬಾಲಪ್ರತಿಭೆಯಾಗಿ ಸಂಗೀತಕ್ಷೇತ್ರಕ್ಕೆ ಬಂದ ಇವರು ಛೈಲ್ಡ್ ಪ್ರಾಡಜಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಕೇಂದ್ರ ಸರ್ಕಾರದ ಯಂಗ್ ಅಚೀವರ್ಸ್ ವಿದ್ಯಾರ್ಥಿವೇತನವನ್ನು ಪಡೆದಿದ್ದಾರೆ. ಇವರ ಹಲವು ಆಲ್ಬಂಗಳು ಹೊರಬಂದಿವೆ. ದೇಶದ ಎಲ್ಲಾ ಪ್ರಮುಖ ಸಭೆಗಳಲ್ಲಿಯೂ ನುಡಿಸಿದ್ದಾರೆ. ಆಕಾಶವಾಣಿಯ 'ಎ' ದರ್ಜೆ ಕಲಾವಿದರಾಗಿರುವ ಇವರು ಶ್ರೀಕೃಷ್ಣ ಗಾನ ಸಭೆಯ ಅತ್ಯುತ್ತಮ ಕಛೇರಿ ಪ್ರಶಸ್ತಿ, ನಾರದ ಗಾನ ಸಭೆಯ ಅತ್ಯುತ್ತಮ ವಾದಕ ಮತ್ತು ಮ್ಯೂಸಿಕ್ ಅಕಾಡೆಮಿಯ ಅತ್ಯುತ್ತಮ ಕಛೇರಿ ಪ್ರಶಸ್ತಿಗಳಿಗೆ ಪಾತ್ರರು. ಇವೇ ಅಲ್ಲದೆ ಇನ್ನೂ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸೆಪ್ಟೆಂಬರ್
September
18
ಮಂಗಳವಾರ
Tuesday

**ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ**
**ವ್ಯಾಖ್ಯಾನ ವಿಷಯ: ಕೀಚಕ ಪ್ರಸಂಗ ಭಾಗ-2**
**ವಾಚನಕಾರರು: ಶ್ರೀಮತಿ ಇಂದಿರಾ ಗೋಪಿನಾಥ್ ಶಾಸ್ತ್ರೀ, ಚನ್ನರಾಯಪಟ್ಟಣ**
**ವ್ಯಾಖ್ಯಾನಕಾರರು: ಶ್ರೀ ಸಂತೋಷ್, ಚನ್ನರಾಯಪಟ್ಟಣ**

ಸಂಜೆ 6.45ಕ್ಕೆ
**ವಿದುಷಿ ಡಾ. ನಿತ್ಯಶ್ರೀ ಮಹಾದೇವನ್** – ಗಾಯನ
ವಿದ್ವಾನ್ ಎಂ.ಎ.ಕೃಷ್ಣಸ್ವಾಮಿ – ವಯೋಲಿನ್
ವಿದ್ವಾನ್ ನಂಜಿಲ್ ಅರುಳ್ – ಮೃದಂಗ
ವಿದ್ವಾನ್ ಶ್ರೀಶೈಲ – ಘಟಂ

6.45 pm
**Vidushi Dr. Nityashree Mahadevan** - Vocal
Vidwan M.A.Krishnaswamy - Violin
Vidwan Nanjil Arul - Mridangam
Vidwan Srishyla - Ghatam



**ವಿದುಷಿ ಡಾ ನಿತ್ಯಶ್ರೀ ಮಹಾದೇವನ್**

ಡಿ ಕೆ ಪಟ್ಟಮ್ಮಾಳ್, ಪಾಲ್ಘಾಟ್ ಮಣಿ ಅಯ್ಯರ್, ಡಿ ಕೆ ಜಯರಾಮನ್ ಇಂತಹ ಖ್ಯಾತ ಕಲಾವಿದರ ಕುಟುಂಬದ ಕುಡಿ ನಿತ್ಯಶ್ರೀ ಮಹದೇವನ್ ಬಹುಮುಖ ಪ್ರತಿಭೆಯ ಹೆಸರಾಂತ ಕಲಾವಿದೆ. ತಾಯಿ ಲಲಿತಾ ಶಿವಕುಮಾರ್ ಮತ್ತು ಅಜ್ಜಿ ಡಿ ಕೆ ಪಟ್ಟಮ್ಮಾಳ್ ಅವರ ಬಳಿ ನಿತ್ಯಶ್ರೀ ಅವರಿಗೆ ಪಾಠ. ಇಂದು ಬಹುಬೇಡಿಕೆಯಲ್ಲಿರುವ ನಿತ್ಯಶ್ರೀ ಅವರು ದೇಶದ ಹಾಗೂ ವಿದೇಶದ ಎಲ್ಲಾ ಪ್ರತಿಷ್ಠಿತ ಸಭೆಗಳಲ್ಲಿಯೂ ತಮ್ಮ ಗಾಯನ ಪ್ರಸ್ತುತಪಡಿಸಿದ್ದಾರೆ. ಸಂಗೀತ ಕುರಿತು ಮಹಾಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಕಲೈಮಾಮಣಿ, ಇಸೈ ಪೆರೋಲಿ ಇನ್ನೂ ಮುಂತಾದ ಪ್ರಶಸ್ತಿಗಳು ಇವರಿಗೆ ಸಂದಿವೆ. ಗೋಪಾಲಕೃಷ್ಣ ಭಾರತಿಯಾರ್ ಅವರ ಕೃತಿಗಳನ್ನು ತುಂಬಾ ಜನಪ್ರಿಯಗೊಳಿಸಿರುವ ಯಶಸ್ಸು ನಿತ್ಯಶ್ರೀಯವರಿಗೆ ಸಲ್ಲಬೇಕು. ಅವರನ್ನು ಕುರಿತು ಹಲವು ಪ್ರಾತ್ಯಕ್ಷಿಕೆಗಳನ್ನೂ ನಿತ್ಯಶ್ರೀ ಪ್ರಸ್ತುತಪಡಿಸಿದ್ದಾರೆ. ಹಿನ್ನೆಲೆಗಾಯಕಿಯಾಗಿಯೂ ಇವರದು ದೊಡ್ಡ ಹೆಸರು. ಅವರ ಅತ್ಯಂತ ಪ್ರಸಿದ್ಧ ಹಾಡುಗಳೆಲ್ಲವೂ ಎ ಆರ್ ರೆಹಮಾನ್ ಅವರ ನಿರ್ದೇಶನದಲ್ಲಿದೆ. ತಾರ ಶ್ರುತಿಯಲ್ಲಿ ಹಾಡಬಲ್ಲಂತಹ ಅತ್ಯಂತ ಆಕರ್ಷಕವಾದ ಶಾರೀರ ನಿತ್ಯಶ್ರೀ ಅವರದು. ಇವರ ನೂರಕ್ಕೂ ಹೆಚ್ಚು ಆಲ್ಬಂಗಳು ಬಿಡುಗಡೆಯಾಗಿವೆ.

ಸೆಪ್ಟೆಂಬರ್
September
**19**
ಬುಧವಾರ
Wednesday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಕೀಚಕ ಪ್ರಸಂಗ ಭಾಗ-3
ವಾಚನಕಾರರು: ಶ್ರೀಮತಿ ಭಾಗ್ಯಲಕ್ಷ್ಮಿ ವಿ ಕೆ ಎಸ್ ಮಂಡ್ಯ
ವ್ಯಾಖ್ಯಾನಕಾರರು: ಶ್ರೀಮತಿ ನಾಗಲಕ್ಷ್ಮಿ ಚಂದ್ರಶೇಖರ್

ಸಂಜೆ 6.45ಕ್ಕೆ
**ವಿದ್ವಾನ್ ನೆಮ್ಮಾರ ಎನ್.ಆರ್ ಕಣ್ಣನ್ ಮತ್ತು**
**ವಿದ್ವಾನ್ ಏನ್.ಆರ್. ಆನಂದ್** - ನಾದಸ್ವರ
ವಿದ್ವಾನ್ ಶ್ರೀಲಂಕಾ ಆರ್ ವಿ ಯಸ್ ಶ್ರೀಕಾಂತ್ - ತವಿಲ್
ವಿದ್ವಾನ್ ಕಾಂತುಕುರ್ ಮನೋಹರ್ - ತವಿಲ್

6.45 pm
**Vidwan Nemmara N.R.Kannan and**
**Vidwan N.R. Anand Brahma** - Nadaswaram
Vidwan Srilanka RVS Srikanth - Thavil
Vidwan Kanthukur Manohar - Thavil



**ವಿದ್ವಾನ್ ನೆಮ್ಮಾರ ಸಹೋದರರು**

ನೆಮ್ಮಾರ ಸಹೋದರರು ಎಂದೇ ಖ್ಯಾತರಾಗಿರುವ ನೆಮ್ಮಾರ ಎನ್ ಆರ್ ಕಣ್ಣನ್ ಮತ್ತು ಎನ್ ಆರ್ ಆನಂದ ಬ್ರಹ್ಮ ಪುದುಕೋಟೆಯ ಹೆಸರಾಂತ ಸಂಗೀತ ಕುಟುಂಬಕ್ಕೆ ಸೇರಿದವರು. ಆರಂಭದ ಮೂರು ವರ್ಷಗಳು ತಮ್ಮ ತಾತ ಕುಂಜಪ್ಪನ್ ಪಿಳ್ಳೈ ಅವರಲ್ಲಿ ನಾದಸ್ವರ ಕಲಿತು, ನಂತರ ಕೇರಳ ಕಲಾಮಂಡಲಂನಲ್ಲಿ ಗುರು ಶ್ರೀ ಶಕ್ತಿವೇಲ್ ಅವರಲ್ಲಿ ಕಲಿಕೆಯನ್ನು ಮುಂದುವರೆಸಿದರು. ಆನಂದ ಬ್ರಹ್ಮ ಈಗ ತಮ್ಮ ಹಿರಿಯ ಸಹೋದರ ಕಣ್ಣನ್ ಅವರಲ್ಲಿಯೇ ಕಲಿಕೆಯನ್ನು ಮುಂದುವರೆಸಿದ್ದಾರೆ. ಕಣ್ಣನ್ ಏಳರ ಹರೆಯದಲ್ಲಿಯೇ ಕಛೇರಿಗಳನ್ನು ನೀಡಲಾರಂಭಿಸಿದರು. ನಂತರದಲ್ಲಿ ಅವರ ಸಹೋದರನೊಂದಿಗೆ ಯುಗಳವಾದನವನ್ನು ಪ್ರಸ್ತುತಪಡಿಸಲಾರಂಭಿಸಿದರು. ಈವರೆಗೆ ಈರ್ವರು 2500 ಕಛೇರಿಗಳನ್ನು ನೀಡಿದ್ದಾರೆ. ಅವರ ಸುಶ್ರಾವ್ಯ ಸಂಗೀತಕ್ಕೆ ಹಲವು ಪ್ರಶಸ್ತಿಗಳು ಸಂದಿವೆ. ಷಣ್ಮುಖ ಸಂಗೀತ ಶಿರೋಮಣಿ ಪ್ರಶಸ್ತಿ, ಕಂಚಿ ಕಾಮಕೋಟಿ ಪೀಠ ಆಸ್ಥಾನ್ ವಿದ್ವಾನ್, ನಾದಸ್ವರ ಈಳಂ ಚಕ್ರವರ್ತಿ, ಸ್ವರ ರಾಗ ಈಳಂ ಚಕ್ರವರ್ತಿ, ಇನ್ನೂ ಮುಂತಾದವು.

ಸೆಪ್ಟೆಂಬರ್
September
**20**
ಗುರುವಾರ
Thursday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಉತ್ತರನ ಪೌರುಷ
ವಾಚನಕಾರರು: ಶ್ರೀಮತಿ ಸುಜಾತಾ ನಿರಂಜನ್
ವ್ಯಾಖ್ಯಾನಕಾರರು: ಶ್ರೀ ಎ ನಿರಂಜನ್

ಸಂಜೆ 6.45ಕ್ಕೆ
**ವಿದ್ವಾನ್ ಎಸ್.ಆರ್ ವಿನಯ್ ಶರ್ವ** – ಗಾಯನ
ವಿದ್ವಾನ್ ಎಂ ಎ ಸುಂದರೇಶ್ವರನ್ – ವಯೋಲಿನ್
ವಿದ್ವಾನ್ ಅರ್ಜುನ್ ಕುಮಾರ್ – ಮೃದಂಗ
ವಿದ್ವಾನ್ ಎಂ ಗುರುರಾಜ್ – ಮೊರ್ಸಿಂಗ್

6.45 pm
**Vidwan S. R Vinay Sharva** - Vocal
Vidwan M A Sundareshwaran - Violin
Vidwan Arjun Kumar - Mridangam
Vidwan M. Gururaj - Morsing



**ವಿದ್ವಾನ್ ಎಸ್ ಆರ್ ವಿನಯ್ ಶರ್ವ**


ಬೆಂಗಳೂರಿನ ವಿನಯ್ ಶರ್ವ ಕರ್ನಾಟಕ ಸಂಗೀತದಲ್ಲಿ ಇಂದು ಅತ್ಯಂತ ಭರವಸೆ ಹುಟ್ಟಿಸಿರುವ ಯುವ ಕಲಾವಿದ. ವಿದ್ವಾನ್ ಎಸ್ ಶಂಕರ್ ಮತ್ತು ವಿದ್ವಾನ್ ಸಂಗೀತ ಕಲಾನಿಧಿ ನೇದನೂರಿ ಕೃಷ್ಣಮೂರ್ತಿಯವರಲ್ಲಿ ಕಲಿತಿರುವ ವಿನಯ್ ತಮ್ಮ ಸೃಜನಶೀಲ ಮನೋಧರ್ಮಕ್ಕೆ ಮತ್ತು ಸುಲಲಿತ ಕಂಠಕ್ಕೆ ಹೆಸರುವಾಸಿ. ದೇಶದಾದ್ಯಂತ ಎಲ್ಲಾ ಪ್ರತಿಷ್ಠಿತ ಸಭೆಗಳಲ್ಲಿ ವಿನಯ್ ಹಾಡಿದ್ದಾರೆ. ಜೊತೆಗೆ ಆಕಾಶವಾಣಿ ಮತ್ತು ವಿಭಿನ್ನ ದೂರದರ್ಶನ ಛಾನಲ್ಲುಗಳಲ್ಲಿ ತಮ್ಮ ಕಲೆಯನ್ನು ಪ್ರಸ್ತುತಪಡಿಸಿದ್ದಾರೆ. ಸಾಹಿತ್ಯದ ಶುದ್ಧ ಉಚ್ಚಾರಣೆ, ಮನೋಧರ್ಮ ತುಂಬಿದ ಆಲಾಪನೆ, ಕರಾರುವಾಕ್ಕಾದ ಲಯ ಇವು ಅವರ ಸಂಗೀತದ ಹೆಗ್ಗುರುತು. ಸಂಕೀರ್ಣ ತಾಳದ ಪಲ್ಲವಿಗಳನ್ನು ವಿನಯ್ ಬಹಳ ಚೆನ್ನಾಗಿ ನಿರ್ವಹಿಸಬಲ್ಲರು. ಹಲವು ಜುಗಲ್‌ಬಂದಿ ಕಾರ್ಯಕ್ರಮಗಳನ್ನೂ ಇವರು ನೀಡಿದ್ದಾರೆ. ಹಲವು ಏಕರಾಗ ಕಛೇರಿಗಳನ್ನೂ ಪ್ರಸ್ತುತಪಡಿಸಿದ್ದಾರೆ. ವೃತ್ತಿಯಿಂದ ಡ್ರೋನ್ ಏರೋಸ್ಪೇಸ್ ಸಿಸ್ಟಮ್ಸ್ ಸಂಸ್ಥೆಯಲ್ಲಿ ಇಲೆಕ್ಟ್ರಾನಿಕ್ ಇಂಜಿನಿಯರ್ ಆಗಿದ್ದಾರೆ. ಅನನ್ಯ ಪ್ರತಿಭಾ ಪುರಸ್ಕಾರ, ಗಾಯನ ಸಮಾಜದ ಅತ್ಯುತ್ತಮ ಗಾಯಕ, ಕಂಚಿ ಕಾಮಕೋಟಿ ಪೀಠದ ಆಸ್ಥಾನ ವಿದ್ವಾನ್ ಮುಂತಾದ ಸಮ್ಮಾನಗಳಿಗೆ ವಿನಯ್ ಭಾಜನರಾಗಿದ್ದಾರೆ.

ಸೆಪ್ಟೆಂಬರ್
September
21
ಶುಕ್ರವಾರ
Friday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಉತ್ತರ ಗೋಗ್ರಹಣ ಭಾಗ-1
ವಾಚನಕಾರರು: ಶ್ರೀಮತಿ ಲತಾ ಫಣಿ
ವ್ಯಾಖ್ಯಾನಕಾರರು: ಶ್ರೀ ಶ್ರೀನಿವಾಸ ಫಣಿ

ಸಂಜೆ 6.45ಕ್ಕೆ
**ವಿದ್ವಾನ್ ಅಶ್ವಥ್ ನಾರಾಯಣನ್** - ಗಾಯನ
ವಿದ್ವಾನ್ ಎಂ ಎ ಸುಂದರೇಶ್ವರನ್ - ವಯೋಲಿನ್
ವಿದ್ವಾನ್ ಕೆ.ವಿ.ಪ್ರಸಾದ್ - ಮೃದಂಗ
ವಿದ್ವಾನ್ ಎಂ ಗುರುರಾಜ್ - ಮೊರ್ಸಿಂಗ್

6.45 pm
**Vidwan Ashwath Narayan** - Vocal
Vidwan M A Sundareshwaran - Violin
Vidwan K.V.Prasad - Mridangam
Vidwan M. Gururaj - Morsing



**ವಿದ್ವಾನ್ ಅಶ್ವಥ್ ನಾರಾಯಣನ್**
ನಾಲ್ಕರ ಎಳೆಯ ಹರೆಯದಲ್ಲೇ ಸಂಗೀತಕ್ಕೆ ತೆರೆದುಕೊಂಡ ಅಶ್ವಥ್ ನಾರಾಯಣನ್ ಅವರ ಮೊದಲ ಗುರು ಶ್ರೀಮತಿ ಜಯಲಕ್ಷ್ಮೀ ಸೌಂದರರಾಜನ್. ನಂತರ ತಮ್ಮ ಕಲಿಕೆಯನ್ನು ಸಂಗೀತ ಕಲಾನಿಧಿ ವಿದ್ವಾನ್ ಪಾಲ್ಘಾಟ್ ಕೆ ವಿ ನಾರಾಯಣಸ್ವಾಮಿ ಅವರಲ್ಲಿ ಮುಂದುವರೆಸಿದರು. ಅವರು ತೀರಿಹೋದ ನಂತರ ಶ್ರೀಮತಿ ಪದ್ಮಾ ನಾರಾಯಣಸ್ವಾಮಿ ಅವರಲ್ಲಿ ಮುಂದುವರೆಸಿದರು. ಇವರು ತಂಜಾವೂರಿನ ಶಾಸ್ತ್ರ ವಿಶ್ವವಿದ್ಯಾನಿಲಯದ ಬಿ ಟೆಕ್ ಪದವೀಧರರು. ಇವರ ಕಲಾ ಕೌಶಲಕ್ಕೆ ಮಹಾರಾಜಪುರಂ ವಿಶ್ವನಾಥ ಅಯ್ಯರ್ ಟ್ರಸ್ಟ್‌ನ ಯೂತ್ ಎಕ್ಸಲೆನ್ಸ್ ಅವಾರ್ಡ್, ಕಲ್ಕಿ ಕೃಷ್ಣಮೂರ್ತಿ ಮೆಮೋರಿಯಲ್ ಅವಾರ್ಡ್, ಕಾರ್ತಿಕ್ ಫೈನ್ ಆರ್ಟ್ಸ್‌ನ ಇಸೈ ಚೂದರ್, ಕೃಷ್ಣಗಾನ ಸಭೆಯ ಎಂ ಡಿ ರಾಮನಾಥನ್ ಪ್ರಶಸ್ತಿ ಹೀಗೆ ಹಲವು ಸಮ್ಮಾನಗಳು ಸಂದಿವೆ.

ಸೆಪ್ಟೆಂಬರ್
September
22
ಶನಿವಾರ
Saturday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಉತ್ತರ ಗೋಗ್ರಹಣ ಭಾಗ–2
ವಾಚನಕಾರರು: ಶ್ರೀಮತಿ ಪ್ರಫುಲ್ಲ ಜಗನ್ನಾಥ್
ವ್ಯಾಖ್ಯಾನಕಾರರು: ಶ್ರೀ ಎಂ ಎನ್. ಪ್ರಭಾಕರ್

ಸಂಜೆ 6.45ಕ್ಕೆ
**ವಿದ್ವಾನ್ ಎ ಅನಂತ ಪದ್ಮನಾಭನಾಭನ್**
**ವಿದ್ವಾನ್ ಆನಂದ್ ಕೌಶಿಕ್** – ದ್ವಂದ್ವ ವೀಣಾ ವಾದನ
ವಿದ್ವಾನ್ ಕೆ.ವಿ. ಪ್ರಸಾದ್ – ಮೃದಂಗ
ವಿದ್ವಾನ್ ಎಂ ಆರ್ ಮಂಜುನಾಥ್ – ಘಟಂ

6.45 pm
**Vidwan A Anantha Padmanabhan**
**Vid Anand Koushik** - Veena Duo
Vidwan K.V.Prasad - Mridangam
Vidwan G.S.Ramanujam - Ghatam



**ವಿದ್ವಾನ್ ಎ ಅನಂತ ಪದ್ಮನಾಭನಾಭನ್**

ಸಂಗೀತಗಾರರ ಕುಟುಂಬದಲ್ಲಿ ಜನಿಸಿದ ಅನಂತ ಪದ್ಮನಾಭನ್ ಅವರು ತಮ್ಮ ತಂದೆ ಅನಂತಕೃಷ್ಣ ಅಯ್ಯರ್ ಮತ್ತು ಸಹೋದರಿ ಗೋಮತಿ ಚಿದಂಬರ್ ಅವರಲ್ಲಿ ಕಲಿತು ನಂತರ ತಮ್ಮ ಪ್ರಯತ್ನದಿಂದಲೇ ಹೆಚ್ಚಿನದನ್ನು ಸಂಗೀತದಲ್ಲಿ ರೂಢಿಸಿಕೊಂಡರು. ವೀಣಾವಾದನದಲ್ಲಿ ತಮ್ಮದೇ ಆದ ವಿಶಿಷ್ಟವಾದ ಗಾಯಕಿ ಶೈಲಿಯನ್ನು ಬೆಳೆಸಿಕೊಂಡರು. ಅವರ ಶೈಲಿಯಲ್ಲಿ ಭಾವಲಯಗಳ ನಿಖರತೆ ಮತ್ತು ತಂತ್ರಕರಿ ಶೈಲಿಯ ಲಕ್ಷಣಗಳು ಮೇಳೈಸಿವೆ. ಆಕಾಶವಾಣಿಯ ನಿಲಯದ ಕಲಾವಿದರಾಗಿ 36 ವರ್ಷಗಳು ಸೇವೆ ಸಲ್ಲಿಸಿರುವ ಇವರು ಆಕಾಶವಾಣಿಯ 'ಎ ಟಾಪ್' ಕಲಾವಿದರು. ದೇಶವಿದೇಶಗಳಲ್ಲಿ ಕಛೇರಿ ನೀಡಿರುವ ಇವರು ಯುನೆಸ್ಕೋದ ಬಂಗಾರದ ಹಬ್ಬದಲ್ಲಿ ಪ್ಯಾರಿಸ್‌ನಲ್ಲಿ ನುಡಿಸಿದರು. ಹಿಂದುಸ್ತಾನಿ ಮತ್ತು ಪಾಶ್ಚಿಮಾತ್ಯ ಕಲಾವಿದರೊಂದಿಗೆ ಜುಗಲ್‌ಬಂದಿಗಳನ್ನು ನುಡಿಸಿದ್ದಾರೆ. ಹಲವು ಮಲೆಯಾಳಂ ಸಿನಿಮಾಗಳಿಗೆ ಸಂಗೀತ ನೀಡಿದ್ದಾರೆ. ಗುರವಾಯೂರು ದೇವಾಲಯ ನೀಡುವ ಪ್ರತಿಷ್ಠಿತ ಗುರುವಾಯೂರಪ್ಪನ್ ಚೆಂಬೈ ಪುರಸ್ಕಾರ, ಕೇರಳ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ, ಗಾಯಕರತ್ನಂ, ಸಂಗೀತ ಸಂಪೂರ್ಣ ಮುಂತಾದ ಪ್ರಶಸ್ತಿಗಳು ಶ್ರೀಯುತರಿಗೆ ಸಂದಿವೆ.

ಸೆಪ್ಟೆಂಬರ್
September

**23**

ಭಾನುವಾರ
Sunday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಅಭಿಮನ್ಯು – ಉತ್ತರೆಯ ಪರಿಣಯ ಭಾಗ-1
ವಾಚನಕಾರರು: ಕುಮಾರಿ ಸ್ವಾತಿ ಬಿ ಎನ್
ವ್ಯಾಖ್ಯಾನಕಾರರು: ಡಾ॥ ಅನಿಲ್ ಕುಮಾರ್ ಬಿ.ಎಸ್

ಸಂಜೆ 6.45ಕ್ಕೆ
**ವಿದ್ವಾನ್ ವಿಘ್ನೇಶ್ ಈಶ್ವರ್** – ಗಾಯನ
ವಿದ್ವಾನ್ ವಿಠ್ಠಲ್ ರಂಗನ್ – ವಯೋಲಿನ್
ಪದ್ಮವಿಭೂಷಣ ಡಾ. ಉಯಮಯಾಳಪುರಂ ಕೆ ಶಿವರಾಮನ್ – ಮೃದಂಗ
ವಿದ್ವಾನ್ ಗುರುಪ್ರಸನ್ನ – ಖಂಜಿರ

6.45 pm
**Vidwan Vignesh Eshwar** - Vocal
Vidwan Vittal Rangan - Violin
Padma Vibhushana Dr. Umayalpuram K. Sivaraman - Mridangam
Vidwan Guruprasanna-Khanjeera



**ವಿದ್ವಾನ್ ವಿಘ್ನೇಶ್ ಈಶ್ವರ್**


ಮುಂಬೈನ ಸಂಗೀತಪ್ರೇಮಿಗಳ ಕುಟುಂಬವೊಂದರಲ್ಲಿ ಜನಿಸಿದ ವಿಘ್ನೇಶ್ ಈಶ್ವರ್ ತಮ್ಮ ಅಜ್ಜಿ ಶಾರದಾ ಕೃಷ್ಣನ್ ಅವರಲ್ಲಿ ಸಂಗೀತ ಕಲಿಯಲಾರಂಭಿಸಿದರು. ನಂತರ ಹದಿನೇಳು ವರ್ಷಗಳ ಕಾಲ ಪಾಲಕ್ಕಾಡ್ ಶ್ರೀ ಟಿ ಎಸ್ ಅನಂತರಾಮ ಭಾಗವತ್ ಅವರಲ್ಲಿ ಕಲಿತರು. ಪ್ರಸ್ತುತ ವಿದ್ವಆನ್ ಟಿ ಎಂ ಕೃಷ್ಣ ಅವರ ಮಾರ್ಗದರ್ಶನದಲ್ಲಿ ಕಲಿಕೆ ಮುಂದುವರೆಸುತ್ತಿದ್ದಾರೆ. ಸಂಗೀತ ಮತ್ತು ತಂತ್ರಜ್ಞಾನವನ್ನು ಒಟ್ಟಿಗೆ ತರಲು ಪ್ರಯತ್ನಿಸುತ್ತಿರುವ ಅಪರೂಪದ ಕಲಾವಿದ ವಿಘ್ನೇಶ್, ಬಾರ್ಸಿಲೋನ ವಿಶ್ವವಿದ್ಯಾನಿಲಯದಿಂದ ಸೌಂಡ್ ಮತ್ತು ಮ್ಯೂಸಿಕ್ ಟೆಕ್ನಾಲಜಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ದೇಶವಿದೇಶಗಳ ಹೆಸರಾಂತ ಸಭೆಗಳಲ್ಲಿ ವಿಘ್ನೇಶ್ ಕಾರ್ಯಕ್ರಮ ನೀಡಿದ್ದಾರೆ. ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಹಿರಿಯ ಹೆಸರಾಂತ ಪಕ್ಕವಾದ್ಯ ಕಲಾವಿದರು ಅವರಿಗೆ ಪಕ್ಕವಾದ್ಯ ನುಡಿಸಿದ್ದಾರೆ. ಇದರಿಂದ ಅವರ ಸಂಗೀತ ಮತ್ತಷ್ಟು ಪಕ್ವಗೊಂಡಿದೆ. ಕಾರ್ತಿಕ್ ಫೈನ್ ಆರ್ಟ್ಸ್‌ನ ಡಿ ಕೆ ಪಟ್ಟಮ್ಮಾಳ್ ಪ್ರಶಸ್ತಿ, ಕೃಷ್ಣ ಗಾನ ಸಭಾದ ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಪ್ರಶಸ್ತಿ. ಕೇರಳದ ಸ್ವರಸುಧಾ ಸಂಗೀತ ಪುರಸ್ಕಾರ್ ಇವು ಅವರ ಮುಡಿಗೇರಿರುವ ಕೆಲವು ಗರಿಗಳು.

ಸೆಪ್ಟೆಂಬರ್
September
24
ಸೋಮವಾರ
Monday

ಸಂಜೆ 5.30 ರಿಂದ 6.30 ಕುಮಾರವ್ಯಾಸ ಭಾರತ ವಾಚನ, ವಿರಾಟ ಪರ್ವ
ವ್ಯಾಖ್ಯಾನ ವಿಷಯ: ಅಭಿಮನ್ಯು – ಉತ್ತರೆಯ ಪರಿಣಯ ಭಾಗ–2
ವಾಚನಕಾರರು: ಶ್ರೀಮತಿ ದಾಕ್ಷಾಯಿಣಿ ನಾಗೇಶ್ ರಾವ್
ವ್ಯಾಖ್ಯಾನಕಾರರು: ಶ್ರೀಮತಿ ಪದ್ಮಿನಿ ಹೆಗ್ಡೆ

ಸಂಜೆ 6.45ಕ್ಕೆ
**ವಿದ್ವಾನ್ ಸಿಕ್ಕಿಲ್ ಗುರುಚರಣ್** – ಗಾಯನ
ವಿದ್ವಾನ್ ವಿಠ್ಠಲ್ ರಂಗನ್ – ವಯೋಲಿನ್
ಪದ್ಮವಿಭೂಷಣ ಡಾ. ಉಮಯಾಳಪುರಂ ಕೆ ಶಿವರಾಮನ್ – ಮೃದಂಗ
ವಿದ್ವಾನ್ ಚಂದ್ರಶೇಖರ್ ಶರ್ಮಾ – ಘಟಂ

6.45 pm
**Vidwan Sikkil Gurucharan** - Vocal
Vidwan Vittal Rangan - Violin
Padma Vibhushana Dr. Umayalpuram K .Sivaraman - Mridangam
Vidwan Chadrashekar Sharma - Ghatam



**ಸಿಕ್ಕಿಲ್ ಗುರುಚರಣ್**

ಖ್ಯಾತ ಕೊಳಲುವಾದಕಿ ವಿದುಷಿ ಸಿಕ್ಕಿಲ್ ಕುಂಜುಮಣಿಯವರ ಮೊಮ್ಮಗ ಗುರುಚರಣ್. ಸಂಗೀತ ಸಹಜವಾಗಿಯೇ ಅವರಿಗೆ ಒಲಿದಿತ್ತು. ವೈಗಲ್ ಎಸ್ ಜ್ಞಾನಸ್ಕಂದನ್ ಅವರಲ್ಲಿ ಹಲವು ವರ್ಷಗಳು ಕಲಿತು ಈಗ ವಿದ್ವಾನ್ ಬಿ ಕೃಷ್ಣಮೂರ್ತಿಯವರಲ್ಲಿ ಕಲಿಯುತ್ತಿದ್ದಾರೆ. ಭಾರತದಲ್ಲಿ ವಿಭಿನ್ನ ಕ್ಷೇತ್ರಗಳಲ್ಲಿ ಶತಮಾನ ಗಮನಿಸುವಂತಹ ಬದಲಾವಣೆ ತರಬಲ್ಲ 35 ಯವಕರನ್ನು ಇಂಡಿಯಾ ಟುಡೆ ನಿಯತಕಾಲಿಕೆ ಪಟ್ಟಿಮಾಡಿತ್ತು. ಅದರಲ್ಲಿ ಗುರುಚರಣ್ ಕೂಡ ಒಬ್ಬರು. ಇವರು ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಸ್ನಾತಕೋತ್ತರ ಪದವೀಧರರು. ಕೆಲವು ಕಾಲ ವರ್ಲ್ಡ್ ಸ್ಪೇಸ್ ರೇಡಿಯೋದಲ್ಲಿ ರೇಡಿಯೋ ಜಾಕಿಯಾಗಿಯೂ ಕಾರ್ಯನಿರ್ವಹಿಸಿದರು. ದೇಶದ ಉದ್ದಗಲಕ್ಕೂ ಸಂಚರಿಸಿರುವ ಗುರುಚರಣ್ ಖ್ಯಾತ ಪಾಶ್ಚಿಮಾತ್ಯ ಕಲಾವಿದರಾದ ಜಾನ್ ಮೆಕ್‌ಲಾಗ್ಲಿನ್ ಅಂತಹವರಿಂದಲೂ ಅಪಾರ ಮೆಚ್ಚುಗೆಯನ್ನು ಪಡೆದಿದ್ದಾರೆ. ಕಾರ್ತಿಕ್ ಫೈನ್ ಆರ್ಟ್ಸ್‌ನ ಇಸೈ ಪೆರೋಲಿ, ನೇದನೂರಿ ಕೃಷ್ಣಮೂರ್ತಿ ಪುರಸ್ಕಾರ್, ಯಜ್ಞರಾಮನ್ ಅವಾರ್ಡ್ ಫಾರ್ ಎಕ್ಸಲೆನ್ಸ್, ಉಸ್ತಾದ್ ಬಿಸ್‌ಮಿಲ್ಲಾಖಾನ್ ಯುವಪುರಸ್ಕಾರ ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರು.



ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಸನ್ಮಾನ್ಯ ಮುಖ್ಯಮಂತ್ರಿಗಳು

# ಡೆಂಗಿ ಮತ್ತು ಚಿಕುಂಗುನ್ಯ ಜ್ವರ

## ಇದರ ನಿಯಂತ್ರಣ ನಿಮ್ಮ ಕೈಯಲ್ಲಿದೆ




ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು



ಈಡಿಸ್ ಸೊಳ್ಳೆಗಳು ಸ್ವಚ್ಛ ನಿಂತ ನೀರಿನಲ್ಲಿ ಉತ್ಪತ್ತಿಯಾಗಲಿದ್ದು, ಹಗಲು ಹೊತ್ತಿನಲ್ಲಿ ಮನುಷ್ಯರನ್ನು ಕಚ್ಚುತ್ತವೆ. ಇದರಿಂದ ಡೆಂಗಿ ಮತ್ತು ಚಿಕುಂಗುನ್ಯ ರೋಗಗಳು ಹರಡುತ್ತವೆ. ರೋಗವು ಹರಡದಂತೆ ಎಚ್ಚರಿಕೆ ವಹಿಸುವುದು ಎಲ್ಲರ ಜವಾಬ್ದಾರಿ.

## ಇವನ್ನು ತಡೆಗಟ್ಟಿ ಮುನ್ನೆಚ್ಚರಿಕೆ ಕ್ರಮ ವಹಿಸಿ




ಈ ಯಾವುದೇ ಲಕ್ಷಣಗಳು ಕಂಡು ಬಂದಲ್ಲಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಸರ್ಕಾರಿ ಆಸ್ಪತ್ರೆಯನ್ನು ಸಂಪರ್ಕಿಸಿ

**24x7 ಉಚಿತ ಆರೋಗ್ಯ ಸಹಾಯವಾಣಿ 104ಕ್ಕೆ ಕರೆಮಾಡಿ**

### ಮುನ್ನೆಚ್ಚರಿಕೆ ಕ್ರಮಗಳು

- ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾಗಿ ಮುಚ್ಚಿ.
- ಮನೆಯ ಮೇಲೆ, ಸುತ್ತಮುತ್ತ ನೀರು ಸಂಗ್ರಹವಾಗುವಂತಹ ಪ್ಲಾಸ್ಟಿಕ್ ವಸ್ತುಗಳು, ಟೈರ್‌ಗಳು, ಒಡೆದ ತೆಂಗಿನ ಚಿಪ್ಪು ಇತ್ಯಾದಿಗಳನ್ನು ತಕ್ಷಣ ವಿಲೇವಾರಿ ಮಾಡಿರಿ.
- ಏರ್‌ಕೂಲರ್, ಹೂವಿನಕುಂಡ, ಫೈರ್ ಬಕೆಟ್, ಇತ್ಯಾದಿಗಳ ನೀರನ್ನು ಪ್ರತಿ ವಾರ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿರಿ.
- ಹಗಲಿನಲ್ಲಿ ನಿದ್ದೆ ಮಾಡುವ ಮಕ್ಕಳು ಹಾಗೂ ವಿಶ್ರಾಂತಿ ಪಡೆಯುವ ವಯೋವೃದ್ಧರೂ ಸಹ ಸೊಳ್ಳೆ ನಿರೋಧಕ ಹಾಗೂ ಸೊಳ್ಳೆ ಪರದೆಯನ್ನು ತಪ್ಪದೇ ಬಳಸಿ.

### ರೋಗ ಲಕ್ಷಣಗಳು

- ಇದ್ದಕ್ಕಿದ್ದಂತೆ ತೀವ್ರ ಜ್ವರ
- ಮೈ-ಕೈ ನೋವು ಮತ್ತು ಕೀಲು ನೋವು
- ತೀವ್ರತರವಾದ ತಲೆನೋವು ಹೆಚ್ಚಾಗಿ ಹಣೆಯ ಮುಂಭಾಗ, ಕಣ್ಣಿನ ಹಿಂಭಾಗದ ನೋವು
- ಚರ್ಮದ ಮೇಲೆ ಅಲ್ಲಲ್ಲಿ ರಕ್ತಸ್ರಾವದ ಗುರುತುಗಳು
- ತೀವ್ರ ಸ್ಥಿತಿಯಲ್ಲಿ ಬಾಯಿ, ಮೂಗು ಮತ್ತು ಒಸಡುಗಳಿಂದ ರಕ್ತಸ್ರಾವ
- ವಾಕರಿಕೆ ಮತ್ತು ವಾಂತಿ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಪ್ರಕಟಣೆ: ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | ಕರ್ನಾಟಕ ವಾರ್ತೆ

## SPVGMC TRUST

8th cross
V. V. Mohalla
Mysuru

SPVGMC TRUST


**Patron :**
K V Murthy
**President :**
R Vasudeva Murthy
**Vice President :**
M Laxminarayan

**Secretary :**
C R Himamshu
**Joint Secretary**
N Nagaraj
**Treasurer**
R Gururaj

**Trustees :**
Venugopal T S
Shylaja
Amaresh Das
Sridhar M K
Vasanth
C Cheluvaraj


Our Bank Details :
**SPVGMC TRUST (R)**
Bank : KARNATAKA BANK
Branch : V.V.Mohalla, Mysore
A/c No. : 5052500100501601
IFSC : KARB0000505

# An Appeal

Mysore, the cultural capital of Karnataka is resonant with the music of great maestros. SPVGMC Trust has been playing a crucial role in preserving the continuity of this resonance. It is shouldering the responsibility of keeping classical music alive with all its grandeur. It has been organizing music concerts during the Ganesha festival since 56 years.

All the maestros of Carnatic music, right from Chembai, T.N. Krishnan, K.V. Narayanaswamy, S. Ramanathan, S.Rajam, T.R.Mahalingam, Lalgudi Jayraman, Paroor Gopalakrishnan, D.K. Jayaraman, T.N.Sheshagopal, Madhurai Mani Iyer, R.K. Srikanthan, Umayalapuram Shivaraman, Vellore Ramabhadran, Palghat Raghu to youngsters like T.M Krisna, Ravikiran. N have performed here umpteen number of times. Even the maestros of Hindustani Music like N.Rajam, Hariprasad Chourasia, Gangubai Hangal, Rajiv Taranath have also performed here. All of them without an exception have recognized the significance of this trust. They consider it a privilege to perform here.

SPVGMC also believes in training and educating the listeners. It has also organized 'Learning sessions' tutored by great maestros like S.Rajam, P.S. Narayanaswamy, Chitraveena N Ravikiran, and such others. Highly enlightening and educative 'Lecture Demonstrations' of stalwarts like Umayalapur Sivaraman, T.N.Krishnan, T.N. Sheshagopalan, Mannargudi Eswaran, have also been organized for the benefit of listeners.

SPVGMC trust has been playing the vital role of a cultural ambassador in carrying Carnatic music to the mass. Now its role is all the more crucial in view of the threat posed by the forces of globalization. At this juncture, support of people like you is very crucial to take the trust forward and embark on activities of cultural significance. As you are well aware of the fact that the organization runs purely on the goodwill of the public and the munificence of the patrons, we are really confident that kalarasikas like you can understand our concern and extend your support.

Trustees

***Note : All dona?ons made to SPVGMC Trust (R) are exempted from 80G of INCOME TAX ACT .***